ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ದ.ಕ. ಜಿಲ್ಲೆಯಲ್ಲಿರುವ ಆಶ್ರಮಶಾಲೆಗಳ ಹುದ್ದೆಗಳಲ್ಲಿ ಸಿಬ್ಬಂದಿ ಕೊರತೆ

2969 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಆಶ್ರಮ ಶಾಲೆಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಪ್ರತಿ ಆಶ್ರಮ ಶಾಲೆಗಳಿಗೆ ಮಂಜೂರಾದ ಹುದ್ದೆಗಳೆಷ್ಟು? (ಆಶ್ರಮ ಶಾಲಾವಾರು ವಿವರ ನೀಡುವುದು)

ಇ) ಕೊರತೆಯಿರುವ ಸಿಬ್ಬಂದಿಗಳೆಷ್ಟು? ಅವು ಯಾವುವು? (ತಾಲ್ಲೂಕುವಾರು ಆಶ್ರಮ ಶಾಲಾವಾರು ವಿವರ ನೀಡುವುದು)

ಈ) ಈ ಕೊರತೆಯಿಂದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಮೇಲೆ ಪರಿಣಾಮ ಉಂಟಾಗುವುದಿಲ್ಲವೇ? ಇದನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) 20 ಆಶ್ರಮಶಾಲೆಗಳಿವೆ. ತಾಲ್ಲೂಕುವಾರು ವಿವರದ ಪಟ್ಟಿ ಲಗತ್ತಿಸಿದೆ.

ಆ) ಒಟ್ಟು 'ಸಿ' ವರ್ಗದ ಮಂಜೂರಾದ ಹುದ್ದೆಗಳು - 53

ಒಟ್ಟು 'ಡಿ' ವರ್ಗದ ಸಿಬ್ಬಂದಿ ಮಂಜೂರಾಗಿರುವುದು - 70

(ಆಶ್ರಮಶಾಲಾವಾರು ಸಿಬ್ಬಂದಿಯ ಮಂಜೂರಾತಿ ವಿವರದ ಪಟ್ಟಿ ಲಗತ್ತಿಸಿದೆ)

ಇ) ಒಟ್ಟು 'ಸಿ' ವರ್ಗದಲ್ಲಿ 20 ಹುದ್ದೆಗಳ ಕೊರತೆಯಿದೆ. ಒಟ್ಟು 'ಡಿ' ವರ್ಗದಲ್ಲಿ 15 ಹುದ್ದೆಗಳು ಕೊರತೆಯಿದೆ. (ವಿವರದ ಪಟ್ಟಿ ಲಗತ್ತಿಸಿದೆ)

ಈ) ಸದ್ಯಕ್ಕೆ ಖಾಲಿ ಇರುವ ಹುದ್ದೆಗಳಲ್ಲಿ ಸ್ಥಳೀಯ ಇಲಾಖಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಹೆಚ್ಚುವರಿ ಪ್ರಭಾರ ವ್ಯವಸ್ಥೆಯಿಂದ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ. ಗ್ರೂಪ್ 'ಸಿ' ಹುದ್ದೆಯಾದ ಆಶ್ರಮಶಾಲಾ ಶಿಕ್ಷಕರನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ. ಹಾಗೂ ಗ್ರೂಪ್ 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹಾಗೂ ಮಂಜೂರಾಗಿರುವ ವಿವರ
(ತಾಲ್ಲೂಕುವಾರು : ಆಶ್ರಮವಾರು)

ಕ್ರಸಂ.	ಆಶ್ರಮಶಾಲೆಗಳಿರುವ ಸ್ಥಳ (ತಾಲ್ಲೂಕುವಾರು)	ಆಶ್ರಮ ಶಾಲೆಗಳಿಗೆ ಮಂಜೂರಾದ ಹುದ್ದೆಗಳು (ಆಶ್ರಮ ಶಾಲಾವಾರು ವಿವರ)		ಕೊರತೆಯಿರುವ ಸಿಬ್ಬಂದಿ (ತಾಲ್ಲೂಕು ಆಶ್ರಮ ಶಾಲಾವಾರು ವಿವರ)	
		'ಸಿ' ವರ್ಗ	'ಡಿ' ವರ್ಗ	'ಸಿ' ವರ್ಗ	'ಡಿ' ವರ್ಗ
1	2	3	4	5	6
1)	**ಮಂಗಳೂರು ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ಮಂಗಳೂರು	4	5	1	-
2.	ಕೇಂದ್ರೀಯ ಮಾದರಿ ವಸತಿ ಶಾಲೆ, ಮಧ್ಯ, ಸುರತ್ಕಲ್, ಮಂಗಳೂರು.	-	ಹುದ್ದೆಗಳು ಮಂಜೂರಾಗಿಲ್ಲ		-
2)	**ಬಂಟ್ವಾಳ ತಾಲ್ಲೂಕು**				
1.	ಪ. ವರ್ಗದ ಆಶ್ರಮಶಾಲೆ, ಕುಚ್ಚುಪದವು	2	3	-	-
2.	-"- -"- ಕಡೇಶ್ವಾಲ್ಯ	2	3	2	2
3.	-"- -"- ಜೋಡುಮಾರ್ಗ	4	5	2	2
3)	**ಪುತ್ತೂರು ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ಬಲ್ನಾರ್	3	5	1	-
4)	**ಸುಳ್ಯ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ಸುಬ್ರಮಣ್ಯ	2	3	1	-
2.	ಪ.ವರ್ಗದ ಆಶ್ರಮಶಾಲೆ, ಬಾಳಿಲ	2	3	-	2
3.	ಪ.ವರ್ಗದ ಆಶ್ರಮಶಾಲೆ, ಅಳತಿ	2	3	-	-
5)	**ಕಾರ್ಕಳ ತಾಲ್ಲೂಕು**				
1.	ಪ. ವರ್ಗದ ಆಶ್ರಮಶಾಲೆ, ಕಾರ್ಕಳ	3	4	-	2
2.	-"- -"- ದುರ್ಗ	2	3	1	1
3.	-"- -"- ಹೆಬ್ರಿ	2	3	1	-

1	2	3	4	5	6
6)	**ಬೆಳ್ತಂಗಡಿ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ನಾರಾವಿ,	3	4	3	1
2.	-"- -"- ಧರ್ಮಸ್ಥಳ	4	5	1	1
3.	-"- -"- ನರಿಯಾ	4	5	1	3
4.	-"- -"- ಶೀಶೈಲ	2	3	1	-
7)	**ಉಡುಪಿ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ಬನ್ನಂಜೆ	5	5	3	1
8)	**ಕುಂದಾಪುರ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ ಕುಂದಾಪುರ	3	4	2	-
2.	-"- -"- .ಬೈಂದೂರು	2	2	-	-
3.	-"- -"- ಆರ್ಡಿ	2	2	-	-
	ಒಟ್ಟು 20 ಆಶ್ರಮಶಾಲೆಗಳು	**53**	**70**	**20**	**15**

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಆಯವ್ಯಯದ ಹಂಚಿಕೆ.

2970 - ಶ್ರೀಮತಿ ಡಿ. ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ1997-98ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತವೆಷ್ಟು?

ಆ) 1996-97ನೇ ಸಾಲಿನಲ್ಲಿ ಎಷ್ಟು ಜನ ಅಲ್ಪಸಂಖ್ಯಾತರುಗಳಿಗೆ ಸಹಾಯ ಒದಗಿಸಲಾಗಿದೆ?

ಇ) ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಮೊತ್ತವು ಸಾಕಾಗುವುದೇ?

ಈ) 1997-98ನೇ ಸಾಲಿಗೆ ಹೆಚ್ಚುವರಿ ಮೊತ್ತವನ್ನು ಆಯವ್ಯಯದಲ್ಲಿ ಅಳವಡಿಸಿರುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ1997-98ನೇ ಸಾಲಿಗೆ ಆಯವ್ಯಯದಲ್ಲಿ ಒಟ್ಟು ರೂ. 788.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.